O.S.80/2016 Cross of PW 2

ದಿನಾಂಕ 29-01-2026 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

<u>**ಪಾಟೀ ಸವಾಲು :**</u> ಪ್ರತಿವಾದಿಗಳ ಪರ ಶ್ರೀ ಎ ವಿ ಎಸ್ ವಕೀಲರಿಂದ.

ಈ ದಾವೆ ಮೊದಲು ಎಲ್ಲ ಪಕ್ಷಗಾರರನ್ನು ದಾವೆಯಲ್ಲಿ ಸೇರಿಸಿಲ್ಲ ಎಂದು ವಜಾ ಆಗಿತ್ತು, ದಾವೆ ಪುನಃ ಈ ನ್ಯಾಯಾಲಯಕ್ಕೆ ಬಂದ ನಂತರ ಎಲ್ಲ ಪಕ್ಷಗಾರರನ್ನು ಸೇರಿಸಿದ್ದೀರಿ ಎಂದರೆ ಸರಿ. ದಾವಾ ಆಸ್ತಿ ಸಂಬಂಧಿಸಿದ ಎಲ್ಲರೊಂದಿಗೆ ನೀವು ಪರಿಚಯದಲ್ಲಿ ಇಲ್ಲ ಎಂದರೆ ಸರಿಯಲ್ಲ, ಪರಿಚಯವಿದ್ದೇವೆ ಎನ್ನುತ್ತಾರೆ. ನೀವು ದಾವಾ ಆಸ್ತಿಯಲ್ಲಿ ಯಾವತ್ತು ಇಲ್ಲ ಪ್ರತಿವಾದಿಯರು ದಾವಾ ಆಸ್ತಿಯನ್ನು ಉಳುಮೆ ಮಾಡಿ ಅಭಿವೃದ್ಧಿ ಪಡಿಸಿದ್ದಾರೆ ಎಂದರೆ ಸರಿಯಲ್ಲ, ನಮ್ಮ ತಂದೆ ದಾವಾ ಆಸ್ತಿಯ ಕಬ್ಜೆಯಲ್ಲಿ ಇದ್ದರು ಜೋಯಿಡಾದಲ್ಲಿ ವಾಸ ವಿದ್ದರು ನಮ್ಮ ತಂದೆ ಆಗಾಗ ದಾವಾ ಆಸ್ತಿಗೆ ಬಂದು ಹೋಗುತ್ತಿದ್ದರು ಎನ್ನುತ್ತಾರೆ. ಗುಂಡು ಮತ್ತು ಚಂದ್ರಬಾಯಿ ರವರ ವಾರಸುದಾರರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆ ದಾವೆಯನ್ನು ಹೂಡಿದ್ದರು ಅವರೆ ನಡೆಸುತ್ತಿದ್ದರು ಅವರು ಮರಣಾನಂತರ ನಾನು ಈ ದಾವೆಗೆ ಹಾಜರಾಗುತ್ತಿದ್ದೇನೆ ಎನ್ನುತ್ತಾರೆ. ಗುಂಡು ಮತ್ತು ಚಂದ್ರಬಾಯಿ ರವರ ವಾರಸುದಾರರ ವಾರಸುದಾರರ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ, ಗುಂಡುರವರಿಗೆ 6 ಜನ ಮಕ್ಕಳು ಅವರೆಂದರೆ ಜಾನಬಾ, ಬಾಬು ಮತ್ತು ಕೀರಪ್ಪ, ಜನಾಬಾಯಿ ಬೀಟಾಬಾಯಿ ಮತ್ತು ತುಳಸಾಬಾಯಿ. ಅವರ ಪೈಕಿ ತುಳಸಾಬಾಯಿ ಮತ್ತು ಜನಾಬಾಯಿ ರವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ತುಳಸಾಬಾಯಿ ರವರ ವಾರಸುದಾರರ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸರಿ. ತುಳಸಾಬಾಯಿ ರವರ ವಾರಸುದಾರರು ಅನಸೂಯಾ, ವಿಮಲ್ ಮತ್ತು

ಗುಲಾಬಿ ಎಂಬ ಮಕ್ಕಳು ಇದ್ದಾರೆ ಎಂದರೆ ಸರಿ. ಅವರ ಪೈಕಿ ಗುಲಾಬಿ ಮರಣ ಹೊಂದಿದ್ದು, ಅವರ ವಾರಸುದಾರರಾಗಿ ರಾಮಚಂದ್ರ, ಜಯಶ್ರೀ ಮತ್ತು ಜಾನಕಿ ರವರು ಇದ್ದು ಅವರಲ್ಲಿ ರಾಮಚಂದ್ರ, ಜಯಶ್ರೀ ರವರನ್ನು ಪಕ್ಷಗಾರರನ್ನಾಗಿ ಸೇರಿಸಿದ್ದೀರಿ, ಜಾನಕಿ ರವರನ್ನು ಸೇರಿಸುವುದು ಬಿಟ್ಟು ಅವರ ಮಗಳಾದ ಮಂಜುಳಾ ರವರನ್ನು ಸೇರಿಸಿದ್ದೀರಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನನ್ನ ತಂದೆಗೆ ಗೊತ್ತು ಎನ್ನುತ್ತಾರೆ. ಜಯಶ್ರೀ ಮತ್ತು ಜಾನಕಿ ರವರು ಜನಾಬಾಯಿ ರವರ ವಾರಸುದಾರರು ಎಂದು ತಪ್ಪಾಗಿ ತೋರಿಸಿರುತ್ತೀರಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆ 2 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಈ ದಾವೆಯನ್ನು ಯಾವ ಕಾರಣಕ್ಕಾಗಿ ಮರಳಿಸಲಾಗಿ ಎಂದು ನೀವು ತಿಳಿದುಕೊಂಡು ಅದನ್ನು ಸರಿಪಡಿಸುವ ಪ್ರಯತ್ನ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿದ್ದೇವೆ ಎನ್ನುತ್ತಾರೆ. ಈ ದಾವೆಯನ್ನು ಮರಳಿಸದ ನಂತರ ಎಲ್ಲಾ ವಾರಸುರದಾರರನ್ನು ಸೇರ್ಪಡೆ ಮಾಡಿಲ್ಲ ಸರಿಯಲ್ಲ. ವಾರಸುದಾರರನ್ನು ಸರಿಯಾಗಿ ತೋರಿಸಿಲ್ಲ ಎಂದರೆ ಸರಿಯಲ್ಲ. ಜನಾಬಾಯಿ ರವರ ವಾರಸುದಾರರನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸಾಕ್ಷಿ ಸೇರ್ಪಡೆ ಮಾಡುತ್ತೇವೆ ಎನ್ನುತ್ತಾರೆ. ಜನಾಬಾಯಿ ರವರ ಉಮಾಬಾಯಿ ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡುತ್ತೇವೆ ಎನ್ನುತ್ತಾರೆ. ತುಳಸಾಬಾಯಿ ರವರ ಮಕ್ಕಳಾದ ಅನುಸೂಯ ಮತ್ತು ವಿಮಲ್ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡುತ್ತೇವೆ ಎನ್ನುತ್ತಾರೆ.

ಈ ಹಂತದಲ್ಲಿ ಮುಂದುವರೆದು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

O.S.80/2016 Cross of PW 2

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.